# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1004 |
| ಮಾನ್ಯ ಸದಸ್ಯರ ಹೆಸರು | ಶ್ರೀ ಟಿ.ಎ. ಶರವಣ (ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | 24.02.2023 |
| ಉತ್ತರಿಸುವ ಸಚಿವರು | ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು. |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಕಳೆದ 3 ವರ್ಷಗಳಲ್ಲಿ ಹಿಂದುಳಿದ ವರ್ಗಗಳ ಇಲಾಖೆಯಿಂದ ವಿದ್ಯಾರ್ಥಿಗಳಿಗೆ ಪಾವತಿಸಿರುವ ವಿದ್ಯಾರ್ಥಿ ವೇತನದ ಒಟ್ಟು ಮೊತ್ತವೆಷ್ಟು; (ವರ್ಗವಾರು ವಿವರ ನೀಡುವುದು) | ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಡಿ ಕಳೆದ 3 ವರ್ಷಗಳಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ವಿದ್ಯಾರ್ಥಿಗಳಿಗೆ ಪಾವತಿಸಿರುವ ಮೆಟ್ರಿಕ್-ನಂತರ ಮತ್ತು ಮೆಟ್ರಿಕ್-ಪೂರ್ವ ವಿದ್ಯಾರ್ಥಿ ವೇತನದ ಒಟ್ಟು ಮೊತ್ತದ ವರ್ಗಾವಾರು ವಿವರಗಳು ಅನುಬಂಧ-1 ಮತ್ತು 2ರಲ್ಲಿ ನೀಡಲಾಗಿದೆ. |
| ಆ). | 2020 ರಿಂದ 23ನೇ ಸಾಲಿನ ವರೆಗೆ ರಾಜ್ಯ ವಿದ್ಯಾರ್ಥಿವೇತನ ತಂತ್ರಾಂಶ (State Scholarship Portal) ಅಡಿಯಲ್ಲಿ ಎಷ್ಟು ಸಾಮಾನ್ಯ ವರ್ಗದ ವಿದ್ಯಾರ್ಥಿಗಳು ಅರ್ಜಿಸಲ್ಲಿಸಿರುತ್ತಾರೆ; ಅರ್ಜಿಸಲ್ಲಿಸಿದ ವಿದ್ಯಾರ್ಥಿಗಳಿಗೆ ಕಳೆದ ಮೂರು ವರ್ಷಗಳಿಂದ ಶುಲ್ಕ ಮರು ಪಾವತಿ ಮಾಡದಿರುವುದಕ್ಕೆ ಕಾರಣವೇನು; (ಭೌತಿಕ ಮತ್ತು ಆರ್ಥಿಕ ವಿವರಗಳನ್ನು ವರ್ಷವಾರು ಒದಗಿಸುವುದು) | ಸರ್ಕಾರಿ ಆದೇಶ ಸಂಖ್ಯೆ: ಸಕಇ 225 ಬಿಸಿಎ 2000 ದಿನಾಂಕ:30.03.2002 ರ ಆದೇಶದಲ್ಲಿ ಇರುವ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳು ಮಾತ್ರ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಡಿ ಅನುಷ್ಠಾನಗೊಳಿಸಲಾಗುತ್ತಿರುವ ವಿವಿಧ ವಿದ್ಯಾರ್ಥಿ ವೇತನ ಕಾರ್ಯಕ್ರಮಗಳಡಿ ವಿದ್ಯಾರ್ಥಿ ವೇತನ ಪಡೆಯಲು ಅರ್ಹರಿರುತ್ತಾರೆ. ಆದಕಾರಣದಿಂದ ಈ ಮೇಲ್ಕಂಡ ಆದೇಶದಲ್ಲಿ ಇಲ್ಲದ ಸಾಮಾನ್ಯ ವರ್ಗಗಳ ವಿದ್ಯಾರ್ಥಿಗಳಿಗೆ ಶುಲ್ಕ ಮರು ಪಾವತಿ ನೀಡುತ್ತಿರುವುದನ್ನು ಸರ್ಕಾರದ ಆದೇಶ ಸಂಖ್ಯೆ: ಬಿಸಿಡಬ್ಲ್ಯೂ 357 ಬಿಎಂಎಸ್ 2020 ದಿನಾಂಕ:16.07.2021 ರ ಆದೇಶದಲ್ಲಿ ಕೈಬಿಡಲಾಗಿದೆ. ಆದಕಾರಣ 2020-21 ರಿಂದ 2022-23ನೇ ಸಾಲಿನವರೆಗೂ ಸಾಮಾನ್ಯ ವರ್ಗದ ವಿದ್ಯಾರ್ಥಿಗಳಿಗೆ ಶುಲ್ಕ ಮರು ಪಾವತಿಗಾಗಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯವತಿಯಿಂದ ಅರ್ಜಿಗಳನ್ನು ಆಹ್ವಾನಿಸಿರುವುದಿಲ್ಲ.<br><br>**ಕಂದಾಯ ಇಲಾಖೆ**<br>**(ಕರ್ನಾಟಕ ರಾಜ್ಯ ಬ್ರಾಹ್ಮಣ, ಅಭಿವೃದ್ಧಿ ಮಂಡಳಿ)**<br>2020 ರಿಂದ 2023ನೇ ಸಾಲಿನವರೆಗೆ ರಾಜ್ಯ ವಿದ್ಯಾರ್ಥಿವೇತನ ತಂತ್ರಾಂಶ (State Scholarship Portal) ಅಡಿಯಲ್ಲಿ ಸ್ವೀಕೃತವಾದ ವರ್ಷಾವಾರು ಭೌತಿಕ |

<table>
<tr>
<td></td>
<td></td>
<td>ಮತ್ತು ಆರ್ಥಿಕ ಅರ್ಜಿಗಳ ವಿವರ ಈ ಕೆಳಕಂಡಂತಿದೆ.
<table>
<tr><th>ಕ್ರ ಸಂ</th><th>ಆರ್ಥಿಕ ವರ್ಷ</th><th>ಸ್ವೀಕೃತವಾದ ಅರ್ಜಿಗಳ ಸಂಖ್ಯೆ</th><th>ಶುಲ್ಕ ಮರುಪಾವತಿಗೆ ಆಗತ್ಯವಿರುವ ಅನುದಾನ (ರೂ.ಲಕ್ಷಗಳಲ್ಲಿ</th></tr>
<tr><td>1</td><td>2020-21</td><td>9373</td><td>1028.71</td></tr>
<tr><td>2</td><td>2021-22</td><td>8950</td><td>1053.16</td></tr>
<tr><td>3</td><td>2022-23</td><td colspan="2">ಪ್ರಗತಿಯಲ್ಲಿದೆ</td></tr>
<tr><td></td><td>ಒಟ್ಟು</td><td>18323</td><td>2081.87</td></tr>
</table>
ಅರ್ಜಿ ಸಲ್ಲಿಸಿದ ವಿದ್ಯಾರ್ಥಿಗಳಿಗೆ ಕಳೆದ ಮೂರು ವರ್ಷಗಳಿಂದ ಅನುದಾನ ಕೊರತೆಯಿಂದಾಗಿ ಶುಲ್ಕ ಮರುಪಾವತಿ ಮಾಡಿರುವುದಿಲ್ಲ. ಆದರೆ ಈವರೆವಿಗೂ ವಿದ್ಯಾರ್ಥಿಗಳಿಗೆ ತಲಾ 15000.00 ಗಳಂತೆ ರೂ.2228.70 ಲಕ್ಷಗಳ ವಾರ್ಷಿಕ ನಿರ್ವಹಣಾ ವೆಚ್ಚವನ್ನು ವಿತರಿಸಲಾಗಿರುತ್ತದೆ.</td>
</tr>
<tr>
<td>ಇ)</td>
<td>ರಾಜ್ಯ ವಿದ್ಯಾರ್ಥಿ ವೇತನ ತಂತ್ರಾಂಶ (State Scholarship Portal) ದಡಿ ಸಾಮಾನ್ಯ ವರ್ಗಕ್ಕೆ ಸೇರಿರುವ ಬ್ರಾಹ್ಮಣ ಹಾಗೂ ಆರ್ಯ ವೈಶ್ಯ ವಿದ್ಯಾರ್ಥಿಗಳಿಗೆ ಶುಲ್ಕ ಮರು ಪಾವತಿ ನೀಡಲು ಸರ್ಕಾರವು ಪ್ರತ್ಯೇಕ ಅನುದಾನ ನೀಡಲು ಯಾವ ಕ್ರಮ ಕೈಗೊಂಡಿದೆ?</td>
<td>ಆರ್ಯವೈಶ್ಯ ವಿದ್ಯಾರ್ಥಿಗಳಿಗೆ ಶುಲ್ಕ ಮರುಪಾವತಿಗೆ ಸಂಬಂಧಿಸಿದಂತೆ ಆರ್ಥಿಕ ಇಲಾಖೆ ಜತೆಗೆ ಚರ್ಚಿಸಿ ಸೂಕ್ತ ಕ್ರಮ ವಹಿಸುವ ಬಗ್ಗೆ ಪರಿಶೀಲಿಸಲಾಗುವುದು.</td>
</tr>
</table>

**ಸಂಖ್ಯೆ:ಹಿಂವಕ 132 ಬಿಂಎಂಎಸ್ 2023**

**(ಕೋಟ ಶ್ರೀನಿವಾಸ ಪೂಜಾರಿ)**
ಸಮಾಜ ಕಲ್ಯಾಣ ಹಾಗೂ
ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು

ಮಾನ್ಯ ವಿಧಾನ ಸಭೆಯ ಸದಸ್ಯರಾದ ಶ್ರೀ ಟಿ.ಎ ಶರವಣ ಅವರ ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ 1004 ಕ್ಕೆ
ಅನುಬಂಧ-1

2019-20,2020-21 ಮತ್ತು 2021-22ನೇ ಸಾಲಿನ ಮೆಟ್ರಿಕ್ ನಂತರದ ವಿದ್ಯಾರ್ಥಿವೇತನದ ವಿವರ ( ಪ್ರವರ್ಗವಾರು )

| ಕ್ರ.ಸಂ | ಯೋಜನೆಯ ಹೆಸರು | ಪ್ರವರ್ಗ | ವಿದ್ಯಾರ್ಥಿಗಳ ಸಂಖ್ಯೆ | ಪಾವತಿ ಮಾಡಲಾದ ಮೊತ್ತ (ರೂ.ಗಳಲ್ಲಿ) |
|---|---|---|---|---|
| 1 | ಮೆಟ್ರಿಕ್ ನಂತರದ ವಿದ್ಯಾರ್ಥಿವೇತನ | ಪ್ರವರ್ಗ- 1 | 39997 | 98487250 |
| 2 | | ಪ್ರವರ್ಗ- 2A | 123613 | 270138700 |
| 3 | | ಪ್ರವರ್ಗ-3A | 66834 | 158055700 |
| 4 | | ಪ್ರವರ್ಗ-3B | 104134 | 234851050 |
| ಒಟ್ಟು | | | **334578** | **761532700** |

| | |
|---|---|
| 2020-21 | 2020-21 ನೇ ಸಾಲಿನಲ್ಲಿ ಮೆಟ್ರಿಕ್ ನಂತರದ ವಿದ್ಯಾರ್ಥಿವೇತನ ಕಾರ್ಯಕ್ರಮದಲ್ಲಿ ಕೋವಿಡ್-19 ಕಾರಣದಿಂದ ಯಾವುದೇ ಅರ್ಜಿಗಳನ್ನು ಆಹ್ವಾನಿಸಿರುವುದಿಲ್ಲ. ಈ ಕಾರ್ಯಕ್ರಮದಡಿ ಬಿಡುಗಡೆಯಾದ ಅನುದಾನ ರೂ. 140.00 ಕೋಟಿಗಳನ್ನು ಸರ್ಕಾರದ ಆದೇಶ ಸಂಖ್ಯೆ: ಹಿಂವಕ 322 ಬಿಎಂಎಸ್ 2021 ದಿನಾಂಕ:03.07.2021ರಂತೆ ಮೆಟ್ರಿಕ್ ನಂತರದ ವಿದ್ಯಾರ್ಥಿಗಳಿಗೆ ಶುಲ್ಕ ಮರುಪಾವತಿ ಯೋಜನೆಗೆ ವಿನಿಯೋಗಿಸಲಾಗಿರುತ್ತದೆ. |
| 2021-22 | 2021-22 ನೇ ಸಾಲಿನಲ್ಲಿ ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನ ಕಾರ್ಯಕ್ರಮದಲ್ಲಿ ಕೋವಿಡ್-19 ಕಾರಣದಿಂದ ಶಾಲಾ ಕಾಲೇಜುಗಳು ತಡವಾಗಿ ಆರಂಭವಾಗಿರುತ್ತವೆ ಹಾಗೂ ಕೆಲವೊಂದು ಕೋರ್ಸುಗಳಿಗೆ ಪರೀಕ್ಷೆಗಳನ್ನು ನಡೆಸಿರುವುದಿಲ್ಲ ಆದ ಕಾರಣ ಈ ಕಾರ್ಯಕ್ರಮದಡಿ ಬಿಡುಗಡೆಯಾದ ಅನುದಾನ ರೂ. 50.00 ಕೋಟಿಗಳನ್ನು ಸರ್ಕಾರದ ಆದೇಶ ಸಂಖ್ಯೆ:ಹಿಂವಕ 323 ಬಿಎಂಎಸ್ 2022 ದಿನಾಂಕ:29.04.2022ರಂತೆ ಮೆಟ್ರಿಕ್ ನಂತರದ ವಿದ್ಯಾರ್ಥಿಗಳಿಗೆ ಶುಲ್ಕ ಮರುಪಾವತಿ ಯೋಜನೆಗೆ ವಿನಿಯೋಗಿಸಲಾಗಿರುತ್ತದೆ. |

ತಮ್ಮ ವಿಶ್ವಾಸಿ

ಆಯುಕ್ತರು
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ
ಬೆಂಗಳೂರು.

| ಮಾನ್ಯ ವಿಧಾನ ಸಭೆಯ ಸದಸ್ಯರಾದ ಶ್ರೀ ಟಿ.ಎ ಶರವಣ ಅವರ ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ 1004 ಕ್ಕೆ ಅನುಬಂಧ-2 | | | | |
|---|---|---|---|---|
| **2019-20ನೇ ಸಾಲಿನ ಮೆಟ್ರಿಕ್ ಪೂರ್ವ ವಿದ್ಯಾರ್ಥಿವೇತನದ ವಿವರ ( ಪ್ರವರ್ಗವಾರು )** | | | | |
| ಕ್ರ.ಸಂ | ಯೋಜನೆಯ ಹೆಸರು | ಪ್ರವರ್ಗ | ವಿದ್ಯಾರ್ಥಿಗಳ ಸಂಖ್ಯೆ | ಮಂಜೂರಾದ ಮೊತ್ತ(ರೂ.ಗಳಲ್ಲಿ) |
| 1 | ಮೆಟ್ರಿಕ್ ನಂತರದ ವಿದ್ಯಾರ್ಥಿವೇತನ | ಪ್ರವರ್ಗ- 1 | 356955 | 390934450 |
| 2 | | ಪ್ರವರ್ಗ-2A | 884486 | 758582800 |
| 3 | | ಪ್ರವರ್ಗ3A | 266925 | 230673100 |
| 4 | | ಪ್ರವರ್ಗ-3B | 495891 | 429878600 |
| ಒಟ್ಟು | | | **2004257** | **1810068950** |

ಮಾನ್ಯ ವಿಧಾನ ಸಭೆಯ ಸದಸ್ಯರಾದ ಶ್ರೀ ಟಿ.ಎ ಶರವಣ ಅವರ ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ 1004 ಕ್ಕೆ ಅನುಬಂಧ-2

2020-21ನೇ ಸಾಲಿನ ಮೆಟ್ರಿಕ್ ಪೂರ್ವ ವಿದ್ಯಾರ್ಥಿವೇತನದ ವಿವರ ( ಪ್ರವರ್ಗವಾರು )

| ಕ್ರ.ಸಂ | ಯೋಜನೆಯ ಹೆಸರು | ಪ್ರವರ್ಗ | ವಿದ್ಯಾರ್ಥಿಗಳ ಸಂಖ್ಯೆ | ಮಂಜೂರಾದ ಮೊತ್ತ (ರೂ.ಗಳಲ್ಲಿ) |
|---|---|---|---|---|
| 1 | ಮೆಟ್ರಿಕ್ ಪೂರ್ವ ವಿದ್ಯಾರ್ಥಿವೇತನ | ಪ್ರವರ್ಗ- 1A | 227211 | 282075200 |
| 2 | | ಪ್ರವರ್ಗ-2A | 517489 | 485245500 |
| 3 | | ಪ್ರವರ್ಗ-3A | 156465 | 146968300 |
| 4 | | ಪ್ರವರ್ಗ-3B | 297331 | 279655400 |
| ಒಟ್ಟು | | | **1198496** | **1193944400** |

## ಮಾನ್ಯ ವಿಧಾನ ಸಭೆಯ ಸದಸ್ಯರಾದ ಶ್ರೀ ಟಿ.ಎ ಶರವಣ ಅವರ ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ 1004 ಕ್ಕೆ ಅನುಬಂಧ-2

### 2021-22ನೇ ಸಾಲಿನ ಮೆಟ್ರಿಕ್ ಪೂರ್ವ ವಿದ್ಯಾರ್ಥಿವೇತನದ ವಿವರ ( ಪ್ರವರ್ಗವಾರು )

| ಕ್ರ.ಸಂ | ಯೋಜನೆಯ ಹೆಸರು | ಪ್ರವರ್ಗ-1 | ವಿದ್ಯಾರ್ಥಿಗಳ ಸಂಖ್ಯೆ | ಮಂಜೂರಾದ ಮೊತ್ತ(ರೂ.ಗಳಲ್ಲಿ) |
|---|---|---|---|---|
| 1 | ಮೆಟ್ರಿಕ್ ಪೂರ್ವ ವಿದ್ಯಾರ್ಥಿವೇತನ | ಪ್ರವರ್ಗ- 1 | 192996 | 253751900 |
| 2 | | ಪ್ರವರ್ಗ-2A | 396963 | 376674300 |
| 3 | | ಪ್ರವರ್ಗ-3A | 117479 | 111537500 |
| 4 | | ಪ್ರವರ್ಗ-3B | 224089 | 213203600 |
| ಒಟ್ಟು | | | **931527** | **955167300** |

ತಮ್ಮ ವಿಶ್ವಾಸಿ

ಆಯುಕ್ತರು
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ
ಬೆಂಗಳೂರು.